# ಅಧಿಸೂಚನೆ

ಸಂ ಕೆಇಆರ್ ಸಿ/ಸಿಒಎಸ್/ಡಿಡಿಡಿ/1/2018-19/908 ಬೆಂಗಳೂರು, ದಿನಾಂಕ 22.10.2019.

**ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳು (ಸಿಒಎಸ್) (ಎಂಟನೇ ತಿದ್ದುಪಡಿ), 2019.**

ಕರ್ನಾಟಕ ರಾಜ್ಯದಲ್ಲಿ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳನ್ನು (ಸಿಒಎಸ್) ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 17 ಜೂನ್ 2006 ರಂದು ಅಧಿಸೂಚಿಸಲಾಯಿತು ಮತ್ತು ತರುವಾಯ ಎಂಟು (7) ತಿದ್ದುಪಡಿಗಳನ್ನು ಕಾಲಕಾಲಕ್ಕೆ ನೀಡಲಾಯಿತು.

ಆದರೆ, ಕರ್ನಾಟಕ ರಾಜ್ಯ ಸರ್ಕಾರದ ವಿದ್ಯುತ್ ವಾಹನ (ಇವಿ) ಮತ್ತು ಇಂಧನ ಶೇಖರಣಾ ನೀತಿ 2017 ರ ಅನ್ವಯ ಪರಿಸರ ಸಂರಕ್ಷಣೆಯ ದೊಡ್ಡ ಹಿತಾಸಕ್ತಿಗಾಗಿ ರಾಜ್ಯ ಸರ್ಕಾರದ ವಿದ್ಯುತ್ ಚಲನಶೀಲಪ್ರಯತ್ನಗಳು ಮತ್ತು ಉಪಕ್ರಮವನ್ನು ಬೆಂಬಲಿಸಲು, ರಾಜ್ಯದಲ್ಲಿನ ವಿದ್ಯುತ್ ಪರವಾನಿಗೆದಾರ ಸಂಸ್ಥೆಯಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆವಿಸಕಂನಿ) ಇವರು ಎತ್ತರದ ಕಟ್ಟಡಗಳು, ಶಾಪಿಂಗ್ ಮಾಲ್‌ಗಳು, ಅಪಾರ್ಟ್ ಮೆಂಟ್ ಕಾಂಪ್ಲೆಕ್ಸ್ ಇತ್ಯಾದಿಗಳ ಪಾರ್ಕಿಂಗ್ ಸ್ಥಳದಲ್ಲಿ, ಮೀಸಲಾದ ಮತ್ತು ಕಡ್ಡಾಯವಾದ ವಿದ್ಯುತ್ ವಾಹನ ಚಾರ್ಜಿಂಗ್ ಪಾಯಿಂಟ್‌ಗಳನ್ನು ಒದಗಿಸುವ ಸಲುವಾಗಿ ಸಿಒಎಸ್ ಗೆ ನಿರ್ದಿಷ್ಟ ಷರತ್ತುಗಳನ್ನು ಸೇರಿಸುವ ಮೂಲಕ ಸೂಕ್ತ ವಿನಿಯಮವನ್ನು ಅಧಿಸೂಚಿಸುವಂತೆ ಆಯೋಗವನ್ನು ವಿನಂತಿಸಿದ್ದು, ಅದನ್ನು ಆಯೋಗವು ಸ್ವೀಕಾರಾರ್ಹವೆಂದು ಪರಿಗಣಿಸಿದೆ.

ಇದರ ಪರಿಣಾಮವಾಗಿ, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳಿಗೆ ಕೆಲವು ಷರತ್ತುಗಳನ್ನು ಸೇರಿಸುವುದು ಅಗತ್ಯವೆಂದು ಆಯೋಗವು ಕಂಡುಕೊಂಡಿತು. 2003 ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 181 ರ ಉಪ ಪರಿಚ್ಛೇದ (3) ರ ಅಗತ್ಯತೆಯಂತೆ ಕರಡು ತಿದ್ದುಪಡಿಗಳನ್ನು (ಎಂಟನೇ ತಿದ್ದುಪಡಿ) ಅಧಿಸೂಚನೆಯನ್ನು, ಅಧಿಸೂಚನೆ ಸಂಖ್ಯೆ: ಕೆಇಆರ್ ಸಿ/ಸಿಒಎಸ್/ಡಿ/18-19, ಬೆಂಗಳೂರು, ದಿನಾಂಕ 28.11.2018 ಅನ್ನು 29.11.2018 ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಮತ್ತು ಸಾರ್ವಜನಿಕರ / ಆಸಕ್ತರ ಮಾಹಿತಿಗಾಗಿ ಕರಡು ತಿದ್ದುಪಡಿಗಳನ್ನು ಆಯೋಗದ ವೆಬ್‌ಸೈಟ್ www.karnataka.gov.in/kerc ನಲ್ಲಿ ಕೂಡ ಲಭ್ಯವಿರಿಸಿ, ಭಾಗಿದಾರರಿಂದ ಆಕ್ಷೇಪಣೆಗಳು / ಸಲಹೆಗಳು / ಅಭಿಪ್ರಾಯಗಳನ್ನು ಆಹ್ವಾನಿಸುವ ಪ್ರಕಟಣೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು. ಬೆಸ್ಕಾಂ (BESCOM), ಸೆಸ್ಕ (CESC) ಮತ್ತು ಕೆಎಎಸ್ಎಸ್ಐಎ (KASSIA)

ನಿಂದ ಆಕ್ಷೇಪಣೆಗಳು / ಸಲಹೆಗಳು / ಅಭಿಪ್ರಾಯಗಳನ್ನು ಆಯೋಗಲ್ಲಿ ಸ್ವೀಕರಿಸಲಾಯಿತು. ಆಯೋಗವು ಈ ವಿಷಯದಲ್ಲಿ 08.03.2019 ರಂದು 'ಸಾರ್ವಜನಿಕ ವಿಚಾರಣೆ'ಯನ್ನು ನಿಗದಿಪಡಿಸಿತು, ಆದರೆ ಯಾರೂ ಹಾಜರಾಗಲಿಲ್ಲ. ಬೆಸ್ಕಾಂನಿಂದ ಬಂದ ಆಕ್ಷೇಪಣೆಗಳು / ಸಲಹೆಗಳು / ಅಭಿಪ್ರಾಯಗಳನ್ನು ಆಯೋಗವು ಪರಿಗಣಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ವಿವರವಾದ ಚರ್ಚೆಗಳ ನಂತರ, 2003ರ ವಿದ್ಯುಚ್ಛಕ್ತಿ ಅಧಿನಿಯಮ (2003ರ ಕೇಂದ್ರ ಅಧಿನಿಯಮ ಸಂಖ್ಯೆ 36)ದ, ಪರಿಚ್ಛೇದ 16ರ ಜೊತೆಗೆ ಓದಲಾದ ಕ.ವಿ.ನಿ.ಆ (ವಿದ್ಯುತ್ ಸರಬರಾಜು ಕಂಪನಿಗಳಿಗೆ ಪರವಾನಗಿ ಷರತ್ತುಗಳು) ವಿನಿಯಮಗಳು, 2004ರ, 7.3 ನೇ ಷರತ್ತು ಹಾಗೂ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ಖಂಡ 46 ರಡಿ ಪ್ರದತ್ತವಾದ ಅಧಿಕಾರ ಹಾಗೂ ಈ ಸಂಬಂಧ ದತ್ತವಾದ ಎಲ್ಲಾ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಪೂರೈಕೆ ಷರತ್ತುಗಳಿಗೆ ಮತ್ತಷ್ಟು ತಿದ್ದುಪಡಿಗಳನ್ನು ಮಾಡಿರುತ್ತದೆ, ಅವುಗಳೆಂದರೆ –

**1. ಶೀರ್ಷಿಕೆ ಮತ್ತು ಪ್ರಾರಂಭ:**

(a) ಈ ಷರತ್ತುಗಳನ್ನು, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (CoS) (ಎಂಟನೇ ತಿದ್ದುಪಡಿ), 2019 ಎಂಬುದಾಗಿ ಕರೆಯಬಹುದಾಗಿದೆ.

(b) ಈ ಷರತ್ತುಗಳು, ಕರ್ನಾಟಕ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದ ನಂತರ ಜಾರಿಗೆ ಬರಲಿದ್ದು, ಆ ನಂತರ ವಿದ್ಯುಚ್ಛಕ್ತಿ ಮಂಜೂರಾತಿ ನೀಡಲಾಗುವ ಕಟ್ಟಡಗಳಿಗೆ ಅನ್ವಯಿಸುತ್ತದೆ.

(c) ಈ ಷರತ್ತುಗಳು, ಕರ್ನಾಟಕ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ವಿತರಣಾ ವ್ಯವಹಾರದಲ್ಲಿ ತೊಡಗಿರುವ ಎಲ್ಲಾ ಪರವಾನಿಗೆದಾರರಿಗೆ ಮತ್ತು ವಿದ್ಯುಚ್ಛಕ್ತಿ ಬಳಕೆದಾರರಿಗೆ ಅನ್ವಯಿಸುತ್ತದೆ.

**2. ತಿದ್ದುಪಡಿಮಾಡಲಾದ ಕೆಲವು ಖಂಡಗಳು:**

2006 ರ, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳಲ್ಲಿ, ಅಸ್ತಿತ್ವದಲ್ಲಿರುವ ಕಲಂ 9.0 ರ ನಂತರ, ಕೆಳಗಿನ ಹೊಸ ಷರತ್ತನ್ನು ಸೇರಿಸಿಕೊಳ್ಳುವುದು, ಅವುಗಳೆಂದರೆ –

"**9ಎ.00** - ಕರ್ನಾಟಕ ರಾಜ್ಯದ ಎಲ್ಲಾ ನಗರಗಳು / ನಗರ ಪಾಲಿಕೆ ಪ್ರದೇಶಗಳ ಮಹಾನಗರಗಳು / ನಗರಾಭಿವೃದ್ಧಿ ಪ್ರಾಧಿಕಾರ ಪ್ರದೇಶಗಳಲ್ಲಿನ ಈ ಕೆಳಕಂಡ ವಾಣಿಜ್ಯ /

ವಸತಿ ಕಟ್ಟಡಗಳು (ಗಳು) / ಸಂಕೀರ್ಣ (ಗಳು) / ಎಂಎಸ್ (MS) ಕಟ್ಟಡ (ಗಳು) ಗಳಿಗೆ ಅನ್ವಯಿಸುತ್ತದೆ:

a) **250 ಕಿ.ವ್ಯಾ** ಗಿಂತ ಅಥವಾ ಹೆಚ್ಚಿನ ವಿದ್ಯುತ್ ಬೇಡಿಕೆಯಿರುವ; ಅಥವಾ

b) ಕಟ್ಟಡದ ಅಂತರ್ನಿರ್ಮಿತ ಪ್ರದೇಶವು **5,000 ಚದರ ಮೀಟರ್** ಗಳಿಗಿಂತ ಹೆಚ್ಚು.

ಮೇಲಿನ ಕಟ್ಟಡಗಳ ಮಾಲೀಕರು / ಅಭಿವೃದ್ಧಿದಾರರು / ನಿವಾಸಿತರು ಅಂತಹ ಕಟ್ಟಡಗಳಲ್ಲಿ ನಾಲ್ಕು / ಮೂರು / ದ್ವಿಚಕ್ರ ವಿದ್ಯುತ್ ವಾಹನಗಳನ್ನು ನಿಲುಗಡೆಗೊಳಿಸಿ, ಅಂತಹ ವಾಹನಗಳನ್ನು ಚಾರ್ಜ್ ಮಾಡುವ ಸಾಮರ್ಥ್ಯವಿರುವ ಎರಡು ಸಂಖ್ಯೆಯ ಚಾರ್ಜಿಂಗ್ ಪಾಯಿಂಟ್ ಗಳಿಗಿಂತ ಕಡಿಮೆ ಇಲ್ಲದಂತೆ ಸಾಕಷ್ಟು ಸ್ಥಳಾವಕಾಶವನ್ನು ಒದಗಿಸಬೇಕು".

ಆಯೋಗದ ಅದೇಶದ ಮೇರೆಗೆ

ಸಹಿ/-

**ಕಾರ್ಯದರ್ಶಿ**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ